# <u>ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.</u>

## ಸಿ. ಸಿ. ನಂಃ **144/2020**

ಪಿ.ಡಬ್ಲ್ಯೂ- **4**
ಸಿ.ಡಬ್ಲ್ಯೂ- **6**

ಹೆಸರು ಃ- ಬಸವರಾಜ ಲಕ್ಕಣ್ಣನವರ

ತಂದೆ / ಗಂಡನ ಹೆಸರು ಃ- ನೀಲಪ್ಪ

ವಯಾ ಃ- 37 ವರ್ಷ

ಉದ್ಯೋಗ ಃ- ಒಕ್ಕಲುತನ

ವಾಸಸ್ಥಳ ಃ- ತಿರಲಾಪುರ

ಸತ್ಯ ಪ್ರತಿಜ್ಞೆ ಮೇರೆಗೆ ಃ- ದಿನಾಂಕಃ 02-07-2025.

*<u>ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ</u>*

1) ಪ್ರಕರಣದ ಆರೋಪಿಯ ಪರಿಚಯವಿಲ್ಲ. ಚಾಸಾ-5 ರವರ ಪರಿಚಯವಿದೆ. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲಾ. ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

2) ಸುಮಾರು 6-7 ವರ್ಷಗಳ ಹಿಂದೆ ಮಾಸ್ತಿ ಕೆರೆಯ ಬಳಿ ಒಂದು ಅಪಘಾತವಾಗಿದ್ದು ನಾನು ಅಲ್ಲಿ ಹೋದಾಗ ಪೊಲೀಸರು ಒಂದು ದಾಖಲೆಯ ಮೇಲೆ ಸಹಿ ಮಾಡಲು ತಿಳಿಸಿದ್ದು ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ-6 ರ ಮೇಲೆ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.6(ಬಿ) ಎಂದು ಗುರುತಿಸಲಾಯಿತು. ನಂತರ ಸ್ಥಳದಲ್ಲಿ ನಿಪಿ-7 ಮತ್ತು ನಿಪಿ-8 ಛಾಯಾಚಿತ್ರವನ್ನು ತೆಗೆದಿದ್ದು ಅದರಲ್ಲಿ ನಾನು ಇರುತ್ತೇನೆ.

3) ನಂತರ ಪೊಲೀಸ ಠಾಣೆಯಲ್ಲಿ ನನಗೆ ಕರೆಯಿಸಿ ಒಂದು ದಾಖಲೆ ಮೇಲೆ ಸಹಿ ಪಡೆದುಕೊಂಡು ಚಾಯಾಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿಯು ನಿಪಿ-10 ರ ಮೇಲೆ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.10(ಬಿ) ಎಂದು ಗುರುತಿಸಲಾಯಿತು. ಚಾಯಾಚಿತ್ರವನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿರುತ್ತದೆ.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಂದ ಮಾನ್ಯ ಸ ಸ ಅ ರವರು ಕೋರಿದ್ದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು.)*

***ಪಾಟೀಸವಾಲು ಃ ಮಾನ್ಯ ಸ ಸ ಅ ರವರಿಂದ ಃ -***

1) ದಿನಾಂಕ 11-09-2019 ರಂದು ಮದ್ಯಾಹ್ನ ಸುಮಾರು 02-00 ಗಂಟೆಗೆ ಚಾಸಾ-1 ಮತ್ತು ಮೃತ ಉಮೇಶನು ಮೋಟಾರ ಸೈಕಲ್ ವಾಹನ ಸಂಖ್ಯೆ ಕೆಎ 26 ವಿ 1427 ನೇದ್ದರ ಮೇಲೆ ಚಾಸಾ-1 ರವರು ಹಿಂಬದಿ ಸವಾರನಾಗಿ ಮೊರಬ ತಿರಲಾಪುರ ರಸ್ತೆಯ ಮೇಲೆ ಹತ್ತಿಗೆ ಹೊಡೆಯುವ ಔಷಧಿಯನ್ನು ತರಲು ಹೋಗುತ್ತಿರುವಾಗ ಅದೇ ಮೊರಬ ತಿರಲಾಪುರ ರಸ್ತೆಯ ಮೇಲೆ ಮಾಸ್ತಿಯವರ ಕೆರೆಯ ಹತ್ತಿರ ಆರೋಪಿತನು ಚಲಾಯಿಸುತ್ತಿದ್ದ ಟ್ರಾಕ್ಟರ ಸಂಖ್ಯೆ ಕೆಎ 25 ಟಿಬಿ 4696 ನೇದ್ದನ್ನು ಹೊಲದ ಕಡೆಯಿಂದ ಒಮ್ಮೆಲೆ ಮೊರಬ ತಿರಲಾಪುರ ರಸ್ತೆಗೆ ತೆಗೆದುಕೊಂಡು ಬಂದು ಅವರ ದ್ವಿಚಕ್ರ ವಾಹನಕ್ಕೆ ಗುದ್ದಿ ಅಪಘಾತ ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2) ಸದರಿ ಅಪಘಾತದ ಸಂಬಂದ ನನ್ನ, ಚಾಸಾ-5 ರವರ ಸಮಕ್ಷಮದಲ್ಲಿ ಘಟನಾ ಸ್ಥಳದ ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ದಿನಾಂಕ 12-09-2019 ರಂದು ಬೆಳಗ್ಗೆ 10-00 ರಿಂದ 11-15 ಗಂಟೆಯವರೆಗೆ ನಿಪಿ-6 ರಂತೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3) ಅದೇ ದಿನ ಅಂದರೆ ದಿನಾಂಕ 12-09-2019 ರಂದು ಮದ್ಯಾಹ್ನ 12-00 ರಿಂದ 01-00 ಗಂಟೆಯವರೆಗೆ ನಿಪಿ-10 ರಂತೆ ವಾಹನ ಜಪ್ತು ಪಂಚನಾಮೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ನಾನು ಎರಡೂ ಸಹಿಗಳನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ದಿನಾಂಕ 12-09-2019 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಎಸ್ ವಿ ಎಂ ವಕೀಲರಿಂದಃ</u>**

1) ಅಪಘಾತ ಸ್ಥಳಕ್ಕೆ ನಾನು ಹೋಗಿರುವುದಿಲ್ಲ ಅಲ್ಲಿ ಯಾವುದೇ ಸಹಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲಾ ಎಂದರೆ ಸರಿ. ಪೊಲೀಸರ ನಿರ್ದೇಶನದ ಮೇರೆಗೆ ಖಾಲಿ ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಚಾಯಾಚಿತ್ರಗಳನ್ನು ಪೊಲೀಸರ ನಿರ್ದೇಶನದ ಮೇರೆಗೆ ನಿಂತು ತೆಗೆಸಿರುತ್ತಾರೆ ಎಂದರೆ ಸರಿ.

<u>ಮರು ವಿಚಾರಣೆ ಃ ಇಲ್ಲಾ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**